ದಿನಾಂಕ ಃ 02-06-2026 ರಂದು ಸಾಕ್ಷಿದಾರರಿಗೆ ಪುನಃ ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಃ ಶ್ರೀ ಎಂ ಹೆಚ್ ಎಸ್ ಕೆ ., ವಕೀಲರಿಂದಃ

ನಾನು ಜಯಪುರ ಗ್ರಾಮದ ಗುಬ್ಬಿಬೈಲಿನ ವಾಸಿಯಾಗಿರುತ್ತೇನೆ. ಆ ರೀತಿಯಾಗಿ ಗುಬ್ಬಿಬೈಲು ಗ್ರಾಮದಲ್ಲಿ 119 ಮನೇಗಳು ಇರುತ್ತವೆ. ಜಯಪುರ ಗ್ರಾಮದ ಸರ್ವೆ ನಂಬರ್ 115 ಸರ್ಕಾರಕ್ಕೆ ಸೇರಿದ ಜಾಗವಾಗಿರುತ್ತದೆ ಎಂದರೆ ಆ ಬಗ್ಗೆ ಗೊತ್ತಿರುವುದಿಲ್ಲ. ನಾನು ಗುಬ್ಬಿಬೈಲು ಊರಿನ ಯಾವುದೆ ಸಂಘ ಸಂಸ್ಥೆಗಳಿಗೆ ಸೇರಿರುವುದಿಲ್ಲ ಎಂದರೆ ಸರಿ.

ನನ್ನನ್ನು ಒಳಗೊಂಡಂತೆ ಉಳಿದ ವಾದಿಗಳೆಲ್ಲಾ ಯಾವುದೆ ಸಂಘ ಸಂಸ್ಥ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ದಾವೆಯಲ್ಲಿ ನಮ್ಮ ಊರಿನ ಯಾವುದೇ ಮಹಿಳೆಯರು ವಾದಿಗಳಾಗಿ ಪಕ್ಷದಲ್ಲಿ ಇರುವುದಿಲ್ಲ ಎಂದರೆ ಸರಿ. ನಾನು ಯಾವುದೆ ರಾಜಕೀಯ ಪಕ್ಷದಲ್ಲಿ ಇರುವುದಿಲ್ಲ. ನನ್ನ ಜೀವಮಾನದಲ್ಲಿ ಸಾರ್ವಜನಿಕ ಹಿತಾಸಕ್ತಿಗೆ ಹೋರಾಟ ಮಾಡುವುದಕ್ಕಾಗಿ ಯಾವುದೇ ದಾವೆ ಸಲ್ಲಿಸಿರುವುದಿಲ್ಲ. ನಾನು ಗ್ರಾಮಸ್ಥರ ಹಿತ ರಕ್ಷಣೆಗಾಗಿ ದಾವೆಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ.

ಮಾನ್ಯ ಜಿಲ್ಲಾಧಿಕಾರಿಗಳು ಸರ್ವೆ ನಂಬರ್ 115 ರಲ್ಲಿ ಪ್ರತಿವಾದಿ ಪಿಡಿಒ ಅವರಿಗೆ ಸರ್ವೆ ನಂಬರ್ 115 ರಲ್ಲಿ 2 ಎಕರೆ ಜಮೀನನ್ನು ಕಸದ ವಿಲೇವಾರಿಗಾಗಿ ಮಂಜೂರು ಮಾಡಲಾಗಿರುತ್ತದೆ ಎಂದರೆ ಆ ಬಗ್ಗೆ ಗೊತ್ತಿರುವುದಿಲ್ಲ.

ಪ್ರಸ್ತುತ ದಾವೆಯಲ್ಲಿ ಮಧ್ಯಂತರ ಅರ್ಜಿ ವಜಾಗೊಂಡಿರುವುದು ನನಗೆ ಗೊತ್ತಿರುವುದಿಲ್ಲ. ತಾತ್ಕಾಲಿಕ ತಡೆಯಾಜ್ಞೆ ಮಧ್ಯಂತರ ಅರ್ಜಿ ವಜಾಗೊಂಡಿರುವ ಬಗ್ಗೆ ನನ್ನ ವಕೀಲರು ಮಾಹಿತಿ ನೀಡಿರುವುದಿಲ್ಲ. ಸರ್ವೆ ನಂಬರ್ 115 ರ ಪಹಣಿಯನ್ನು ನಾನು ಇತ್ತೀಚೆಗೆ ನೋಡಿರುವುದಿಲ್ಲ ಎಂದರೆ ಸರಿ. ದಿನಾಂಕಃ 21/08/2019 ರ ಪ್ರತಿವಾದಿ ಸಲ್ಲಿಸಿರುವ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ಸದರಿ ದಾಖಲಾತಿಗಳನ್ನು ನಮ್ಮ ವಕೀಲರು ಪಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಓದಲು, ಬರೆಯಲು ಬರುತ್ತದೆ ಎಂದರೆ ಸರಿ.

ಸಾಕ್ಷಿಗೆ ಒಂದು ದಾಖಲೆಯನ್ನು ನೀಡಿ ಓದುವಂತೆ ಹೇಳಿದ್ದು ಸಾಕ್ಷಿ ಸದರಿ ದಾಖಲೆಯನ್ನು ಪರಿಶೀಲಿಸಿ , ಓದಿ , ಸದರಿ ದಾಖಲೆ ಗ್ರಾಮ ಪಂಚಾಯಿತಿಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಭೂಮಿಯನ್ನು ಮಂಜೂರು ಮಾಡಿದ ಬಗ್ಗೆ ದಾಖಲೆಯಾಗಿರುತ್ತದೆ ಎಂದು ಗುರುತಿಸಿದ್ದು ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿ ಒಪ್ಪಿದ್ದರಿಂದ ನಿಡಿ.1 ಎಂದು ಗುರುತಿಸಲಾಯಿತು.

ಗ್ರಾಮ ಪಂಚಾಯಿತಿಯವರು ಸುಮಾರು 9 ಬಾರಿ ಸರ್ವೆ ಯನ್ನು ದಾವಾ ಸರ್ವೆ ನಂಬರ್ ನಲ್ಲಿ ಮಾಡಿರುತ್ತಾರೆ. ದಾವೆಯಲ್ಲಿ ಹಾಕಿರುವ ಚೆಕ್ಕುಬಂಧಿಗಳನ್ನು ಊಹೆಯ ಮೇಲೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ನಲ್ಲಿರುವ ಚೆಕ್ಕುಬಂಧಿಗಳನ್ನು ಯಾವ ದಾಖಲಾತಿಯ ಆಧಾರದ ಮೇಲೆ ನಮೂದು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಜಯಪುರ ಗ್ರಾಮ ಪಂಚಾಯಿತಿಯಲ್ಲಿ ಮೇಗುಂದ ಹೋಬಳಿ ಅತಿ ದೊಡ್ಡ ಗ್ರಾಮ ಪಂಚಾಯಿತಿಯಾಗಿರುತ್ತದೆ ಎಂದರೆ ಸರಿ. ಮೇಗುಂದ ಹೋಬಳಿಯೂ ಸಹಾ ಜಯಪುರ ಗ್ರಾಮ ಪಂಚಾಯಿತಿಯಲ್ಲಿರುತ್ತದೆ ಎಂದರೆ ಸರಿ. ಜಯಪುರ ಗ್ರಾಮ ಪಂಚಾಯಿತಿಯ ದಾವ ಶೆಡ್ಯೂಲ್ ಹೊರತುಪಡಿಸಿ ಉಳಿದೆಲ್ಲಾ ಪ್ರದೇಶ ಜನ ನಿಬಿಡವಾಗಿರುತ್ತದೆ ಎಂದರೆ ಸರಿ.

ಗ್ರಾಮ ಪಂಚಾಯಿತಿಯ ಮಂಜೂರಾದ ಸರ್ವೆ ನಂಬರ್ 115 ರ 2 ಎಕರೆ ಜಾಗದ ಒಳಗೆ ಯಾವುದೇ ವಾಸದ ಮನೆಗಳು ಇರುವುದಿಲ್ಲ ಎಂದರೆ ಸರಿ. ಗ್ರಾಮ ಪಂಚಾಯಿತಿಗೆ ಮಂಜೂರಾಗಿರುವ 2 ಎಕರೆ ಭೂಮಿಯ ಯಾವ ದಿಕ್ಕಿನಲ್ಲಿ ಸ್ಮಶಾನ ಇರುತ್ತದೆ ಎಂದರೆ ಆ ಬಗ್ಗೆ ಗೊತ್ತಿರುವುದಿಲ್ಲ. ಅದೇ ರೀತಿ ಯಾವ ದಿಕ್ಕಿಗೆ ಅರಣ್ಯ ಭೂಮಿ ಇರುತ್ತದೆ ಎಂದರೆ ಪಶ್ಚಿಮ ದಿಕ್ಕಿಗೆ ಇರುತ್ತದೆ ಎನ್ನುತ್ತಾರೆ. ವಾಸದ ಮನೆಗಳು ದಾವಾ ಶೆಡ್ಯೂಲ್ ನ ಪೂರ್ವ ದಿಕ್ಕಿಗೆ ಇರುತ್ತವೆ. ಹಾಗೂ ದಾವಾ ಶೆಡ್ಯೂಲ್ನ ದಕ್ಷಿಣ ದಿಕ್ಕಿಗೆ ರಸ್ತೆ ಇರುತ್ತದೆ.

ಜಯಪುರ ಗ್ರಾಮ ಪಂಚಾಯಿತಿಯ ಸರ್ವೆ ನಂಬರ್ 115 ರಲ್ಲಿ ಸರ್ಕಾರ ಮಂಜೂರು ಮಾಡಿರುವ ಭೂಮಿಯಲ್ಲಿ ಕಸ ವಿಲೇವಾರಿ ಮಾಡುವ ಎಲ್ಲಾ ಹಕ್ಕು ಬಾಧ್ಯತೇ ಇರುತ್ತದೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯಿತಿಯ ಮೇಲೆ ರಾಜಕೀಯ ಮೇಲಾದ ಮನ ಬಳಸಿಕೊಂಡು ಸದರಿ ದಾವಾ ಸ್ವತ್ತನು ಕಬಳಿಸಲು ಸದರಿ ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಜಯಪುರ ಗ್ರಾಮ ಪಂಚಾಯಿತಿಯಲ್ಲಿ ಕಸ ವಿಲೇವಾರಿ ಸಮರ್ಪಕವಾಗಿ ಮಾಡಬೇಕೆಂಬ ಬಗ್ಗೆ ಇಡೀ ಊರಿನವರು ಧರಣಿ ಮಾಡಿದ್ದರು ಎಂದರೆ ಸರಿ.

ಜಯಪುರ ಗ್ರಾಮ ಪಂಚಾಯಿತಿಯ ಪೇಟೆಯು ದಾವಾ ಸ್ವತ್ತಿಗೆ ಹೊಂದಿಕೊಂಡಂತೆ ಇರುತ್ತದೆ

ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಸದರಿ ದಾವೆಯನ್ನು ಸಲ್ಲಿಸಲು ಯಾವುದೆ ಹಕ್ಕು, ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ. ದಾವೆಗೆ ವ್ಯಾಜ್ಯ ಕಾರಣವನ್ನು ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿ.

ನಾನು ಯಾವುದೇ ಸಮಯದಲ್ಲೂ ಸಹಾ ದಾವೆಯಲ್ಲಿ ಸದುದ್ದೇಶವನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ವಾದ ಪತ್ರ ಹಾಗೂ ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಸರ್ಕಾರದಿಂದ ಜಾಗ ಮಂಜೂರಾಗುವ ಪ್ರಕ್ರಿಯೆ ಚಾಲ್ತಿಯಲ್ಲಿತ್ತು ಎಂದರೆ 2 ವರ್ಷದ ನಂತರ ಪ್ರಕ್ರಿಯೆ ಪ್ರಾರಂಭವಾಯಿತು ಎನ್ನುತ್ತಾರೆ. ದಾವಾ ಶೆಡ್ಯೂಲ್ನ ಮಂಜೂರಾತಿಯ ವಿರುದ್ಧ ನಾನು ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಓ

ಸಹಿ/-
(ನಂದಿನಿ ಎಮ್. ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಃ ಕೊಪ್ಪ.

ಸಾಕ್ಷಿಯ ಸಹಿಃ